ವಿಜಯವಾಣಿ
ಕನ್ನಡಿಗರ ಧ್ವನಿ

**Monday 20th May 2024**

**Education EXPO: RVCE Principal**

# ಇಂಜಿನಿಯರಿಂಗ್ ಅಂದ್ರೆ ಸಿಎಸ್ ಒಂದೇ ಅಲ್ಲ



**ಬೆಂಗಳೂರು:** ಉನ್ನತ ಶಿಕ್ಷಣದ ಆಯ್ಕೆಯಲ್ಲಿ ಗ್ರಾಮೀಣ ವಿದ್ಯಾರ್ಥಿಗಳಿಗಿಂತ ನಗರ ಪ್ರದೇಶದ ಮಕ್ಕಳಿಗೇ ಹೆಚ್ಚಿನ ಗೊಂದಲ ನಿರ್ಮಾಣವಾಗುತ್ತಿದೆ. ಈ ಗೊಂದಲ ತೊಲಗಿಸಿ ಕಾಲೇಜು ಮತ್ತು ಕ್ಲಸ್ಟರ್ ಆಯ್ಕೆಯಲ್ಲಿ ಸ್ಪಷ್ಟತೆ ಹೊಂದುವುದು ಬಹಳ ಮುಖ್ಯ ಎಂದು ಆರ್‌ವಿ ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲ ಡಾ. ಕೆ.ಎನ್. ಸುಬ್ರಮಣ್ಯ ಸಲಹೆ ನೀಡಿದರು.

- » **ಆರ್‌ವಿ ತಾಂತ್ರಿಕ ಕಾಲೇಜಿನ ಪ್ರಾಂಶುಪಾಲ ಡಾ. ಸುಬ್ರಮಣ್ಯ ಹೇಳಿಕೆ**
- » **ಕೋರ್ಸ್, ಕಾಲೇಜು ಆಯ್ಕೆಯಲ್ಲಿ ಹಳ್ಳಿ ಮಕ್ಕಳಿಗಿಂತ ನಗರದ ವರಿಗೆ ಹೆಚ್ಚು ಗೊಂದಲ**

ಎಜುಕೇಷನ್ ಎಕ್ಸ್‌ಪೋದಲ್ಲಿ ಭಾನುವಾರ 'ಇಂಜಿನಿಯರಿಂಗ್ ಕೋರ್ಸ್‌ಗಳ ಆಯ್ಕೆಯಲ್ಲಿ ಗಮನಹರಿಸಬೇಕಾದ ಅಂಶಗಳು' ಎಂಬ ವಿಷಯ ಕುರಿತು ಅವರು ವಿಶೇಷ ಉಪನ್ಯಾಸ ನೀಡಿ ವಿದ್ಯಾರ್ಥಿಗಳು ಹಾಗೂ ಪಾಲಕರ ಹಲವು ಗೊಂದಲಗಳನ್ನು ಬಗೆಹರಿಸಿದರು.

ಗ್ರಾಮೀಣ ಪ್ರದೇಶದ ಮಕ್ಕಳು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಂಡು ಪರೀಕ್ಷೆಗೆ ಸಿದ್ಧತೆ ನಡೆಸುತ್ತಾರೆ. ಆದರೆ, ನಗರ ಪ್ರದೇಶದ ಮಕ್ಕಳಿಗೆ ಪಾಲಕರು ಸಿಇಟಿ, ನೀಟ್, ಜೆಇಇ ಸೇರಿ ಹಲವು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಬರೆಸುವ ಮೂಲಕ ಎಲ್ಲಿಯೂ ರ‍್ಯಾಂಕ್ ಬರದಂತೆ ಮಾಡುವ ಪ್ರಕರಣಗಳೇ ಹೆಚ್ಚುತ್ತಿವೆ. ಈ ಕಾರಣದಿಂದ ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಂಡು ಮೊದಲ ಪಿಯುಸಿ ಆರಂಭದಿಂದಲೇ ಸಿದ್ಧತೆ ನಡೆಸಿದಾಗ ನಿಜವಾದ ಗುರಿ ತಲುಪಿ ಯಶಸ್ವಿಯಾಗಲು ಸಾಧ್ಯವಾಗಲಿದೆ ಎಂದರು.

**ತಾಂತ್ರಿಕ ಕೆಲಸಗಳು ಎಂದಿಗೂ ಬೇಡಿಕೆ ಕಳೆದುಕೊಳ್ಳುವುದಿಲ್ಲ:** ದೇಶಾದ್ಯಂತ ಇಂದು ಇಂಜಿನಿಯರಿಂಗ್ ಶಿಕ್ಷಣ ಎಂದಾಕ್ಷಣ ಕಂಪ್ಯೂಟರ್ ಸೈನ್ಸ್ (ಸಿಎಸ್) ಹೊರತುಪಡಿಸಿ ಯಾವುದೇ ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಳ್ಳಲು ವಿದ್ಯಾರ್ಥಿಗಳು ಮುಂದಾಗುತ್ತಿಲ್ಲ. ಆದರೆ, ಕಂಪ್ಯೂಟರ್ ಸೈನ್ಸ್ ನಂತರ ಎಲೆಕ್ಟ್ರಾನಿಕ್ಸ್ ಆ್ಯಂಡ್ ಕಮ್ಯುನಿಕೇಷನ್, ಸಿವಿಲ್ ಮತ್ತು ಮೆಕಾನಿಕಲ್ ಕೋರ್ಸ್‌ಗಳಿಗೂ ಬೇಡಿಕೆ ಇದೆ. ಕಟ್ಟಡ ನಿರ್ಮಾಣ, ವಾಹನಗಳ ತಾಂತ್ರಿಕ ಕೆಲಸಗಳು ಎಂದಿಗೂ ಬೇಡಿಕೆ ಕಳೆದುಕೊಳ್ಳುವುದಿಲ್ಲ ಎಂಬುದನ್ನು ವಿದ್ಯಾರ್ಥಿಗಳು ಹಾಗೂ ಪಾಲಕರು ಅರ್ಥ ಮಾಡಿಕೊಳ್ಳಬೇಕು. ಸಿಎಸ್ ಸಿಗದಿದ್ದರೆ ಶೈಕ್ಷಣಿಕ ಜೀವನ ಮುಗಿಯಿತು ಎಂದು ನಿರ್ಧರಿಸಬೇಡಿ ಎಂದು ಸಲಹೆ ನೀಡಿದರು.

ಮೆಕಾನಿಕಲ್ ವ್ಯಾಸಂಗ ಮಾಡುತ್ತಿರುವವರು ಆನ್‌ಲೈನ್ ಕೋರ್ಸ್ ಮೂಲಕ ಸಿಎಸ್ ಕಲಿತರೆ, ತಮ್ಮಲ್ಲಿನ ಕೌಶಲಗಳು ಹೆಚ್ಚಿನ ಉದ್ಯೋಗವಕಾಶಗಳನ್ನು ಸೃಷ್ಟಿಸಲಿವೆ. ಇಂಜಿನಿಯರಿಂಗ್ ಓದಿದವರು ಈ ಕ್ಷೇತ್ರವನ್ನು ಆಯ್ಕೆ ಮಾಡಿಕೊಳ್ಳದೆ ಐಎಎಸ್‌ನಂತಹ ಸಾರ್ವಜನಿಕ ಸೇವೆಗಳು, ಹಲವು ಸಂಸ್ಥೆಗಳಲ್ಲಿ ಸಿಇಒ ಗಳಾಗಿ, ವ್ಯವಸ್ಥಾಪಕ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿರುವ ಉದಾಹರಣೆಗಳಿವೆ. ಆದ್ದರಿಂದ ಎಲ್ಲದಕ್ಕೂ ಅದರದ್ದೇ ಆದ ಬೇಡಿಕೆಗಳಿವೆ. ಇವುಗಳನ್ನು ತಿಳಿದು ಮುನ್ನಡೆಯುವುದು ಉತ್ತಮ ಎಂದರು.

> ದೇಶದ ತಾಂತ್ರಿಕತೆಯ ಪ್ರಗತಿಯಿಂದ ಸ್ವಿಗ್ಗಿಯವರೆಗೆ ಇಂದು ಇಂಜಿನಿಯರಿಂಗ್ ಪದವೀಧರರು ಕೆಲಸ ಮಾಡುತ್ತಿದ್ದಾರೆ. ಈ ನಡುವೆ ದೇಶದ ಶೇ.25ಕ್ಕೂ ಹೆಚ್ಚಿನ ಹುದ್ದೆಗಳು ಕೌಶಲವಿಲ್ಲದೆ ಖಾಲಿ ಉಳಿದಿವೆ. ಇಂಜಿನಿಯರಿಂಗ್ ಮುಗಿಸಿ ಕೆಲಸ ಸಿಕ್ಕಿಲ್ಲ ಎನ್ನುವವರು ತಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ಕೌಶಲ ಕೋರ್ಸ್ ಮಾಡಿಕೊಂಡರೆ ಖಂಡಿತವಾಗಿಯೂ ಕೆಲಸ ಸಿಗಲಿದೆ.
>
> | ಡಾ. ಕೆ.ಎನ್. ಸುಬ್ರಮಣ್ಯ
> ಆರ್‌ವಿಸಿಇ ಪ್ರಾಂಶುಪಾಲ

## ಸ್ವಸಾಮರ್ಥ್ಯ ತಿಳಿಯಿರಿ

ಕಂಪ್ಯೂಟರ್ ಸೇರಿದ ಶೇ.10ರಿಂದ 20ರಷ್ಟು ಮಕ್ಕಳು ಪೋಷಕರ ಒತ್ತಾಯದ ಮೇರೆಗೆ ಸೇರಿರುತ್ತಾರೆ. ವಿದ್ಯಾರ್ಥಿಗಳಲ್ಲಿ ಸಂಬಂಧಪಟ್ಟ ಕೋರ್ಸ್ ಅನ್ನು ಕಲಿಯುವ ಆಸಕ್ತಿ ಮತ್ತು ಸಾಮರ್ಥ್ಯ ಇರುವುದಿಲ್ಲ. ಇಂತಹ ವಿದ್ಯಾರ್ಥಿಗಳು ಮೊದಲ ವರ್ಷ ಮುಗಿಯುತ್ತಿದ್ದಂತೆ ಅವರಿಗೆ ಬೇಸರ ಉಂಟಾಗಿ ಕೋರ್ಸ್ ಅನ್ನೇ ಬಿಡುವ ಸಾಧ್ಯತೆಗಳಿರುತ್ತವೆ. ಆದ್ದರಿಂದ ಪೋಷಕರು ಮಕ್ಕಳ ಆಸಕ್ತಿ ಕ್ಷೇತ್ರವನ್ನು ತಿಳಿದು ಮುನ್ನಡೆಯಿರಿ ಎಂದು ಡಾ. ಸುಬ್ರಮಣ್ಯ ಸಲಹೆ ನೀಡಿದರು.



ಎಜುಕೇಷನ್ ಎಕ್ಸ್‌ಪೋದಲ್ಲಿ ಭಾನುವಾರ ಆಯೋಜಿಸಲಾಗಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಸಭಿಕರು.